

**ಅರುಣ ಪಿ. ಭಟ್ಟ**

## ವಾರಭವಿಷ್ಯ: 12.9.2019 ರಿಂದ 18.9.2019ರವರೆಗೆ




ಬಹುದಿನದಿಂದ ನಿರೀಕ್ಷಿಸಿದ ಮಕ್ಕಳ ಕೆಲಸದ ಸಮಸ್ಯೆ ಬಗೆಹರಿಯುವುದು. ಸರ್ಕಾರದಿಂದ ಬರುವ ಹಣ ಸಕಾಲಕ್ಕೆ ಬರುವುದು. ಸಂಘ ಸಂಸ್ಥೆಗಳಿಂದ ನಿರೀಕ್ಷಿತ ಲಾಭವಿದೆ. ವಾರಾಂತ್ಯದಲ್ಲಿ ಅನಿರೀಕ್ಷಿತ ಜನವಿರೋಧ.

**ಶುಭದಿನ: 15.** ಆದಿತ್ಯ ಹೃದಯ ಪಠಿಸಿರಿ.




ವಾಹನ ಖರೀದಿಯಲ್ಲಿ ಜಾಗ್ರತೆ. ಬಹುದಿನದ ಸಾಮಾಜಿಕ ಸ್ಥಾನಮಾನದಲ್ಲಿ ಪ್ರಗತಿ ಸಾಧಿಸುವಿರಿ. ಲೇಖಕರಿಗೆ ಶುಭವಾರ್ತೆ ಆರೋಗ್ಯ ಸುಧಾರಣೆ. ವಿವಾಹಾಪೇಕ್ಷಿಗಳಿಗೆ ಉತ್ತಮ ಅವಕಾಶ. ಹೊಸಮನೆ ಕೆಲಸಗಳು ಅಭಾದಿತ.

**ಶುಭದಿನ: 14.** ವಿಷ್ಣು ಸಹಸ್ರನಾಮ ಸ್ತೋತ್ರ ಪಠಿಸಿರಿ.




ಪ್ರಾರಂಭದಲ್ಲಿ ಕಾಲುನೋವು ಉಲ್ಬಣಗೊಳ್ಳುವುದು. ನೆಂಟರ ಆಗಮನದಿಂದ ಮಹತ್ವದ ಚರ್ಚೆ ಫಲಪ್ರದ. ಸಹೋದರರ ನೈಜಮುಖದ ಪರಿಚಯವಾಗುವುದು. ಕೆಲಸದವರಿಂದ ಸಹಾಯ. ವ್ಯಾಪಾರದಲ್ಲಿ ಲಾಭ.

**ಶುಭದಿನ: 18.** ಜನ್ಮಸ್ಥ ರಾಹುದೋಷ ನಿವಾರಣೆಗೆ ಸರ್ಪ ಪೂಜೆ ಮಾಡಿರಿ.




ಅನಪೇಕ್ಷಿತ ಜನರ ಕುಟುಂಬ ಪ್ರವೇಶದಿಂದ ಕಿರಿಕಿರಿ ತಂದೆಯೊಡನೆ ಮನಸ್ತಾಪ ಸಾಧ್ಯತೆ. ವಾಹನ ದುರಸ್ತಿ ಕಾರ್ಯ ಇಲ್ಲವೆ ವಾಹನ ಕಳ್ಳತನವಾಗುವ ಸಾಧ್ಯತೆ. ಕೃಷಿ ಮೂಲದಿಂದ ಧನಲಾಭ. ಸಾಮಾಜಿಕ ಯಶಸ್ಸು.

**ಶುಭದಿನ: 17.** ಲಕ್ಷ್ಮೀ ನರಸಿಂಹ ಸ್ತೋತ್ರ ಪಠಿಸಿರಿ.




ವಾರದ ಪ್ರಾರಂಭದಲ್ಲಿ ಮಾನಸಿಕ ಸ್ವಾಸ್ಥ್ಯ ಕೆಡುವ ಘಟನೆ ಜರುಗುವುದು. ಹೊಟ್ಟೆ ನೋವಿನ ಉಪದ್ರವಗಳು ಕಾಣಿಸಲಿವೆ. ಅವಮಾನಕರ ಪ್ರಸಂಗ ಬರಬಹುದು. ದೈಹಿಕ ಆರೋಗ್ಯ ಚೆನ್ನಾಗಿರುವುದು. ಅಧಿಕಾರಿಗಳಿಂದ ಪ್ರಶಂಸೆ.

**ಶುಭದಿನ: 14.** ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ಹಲವು ಖರ್ಚುಗಳು ಮೇಳೈಸಿ ಬರಲಿವೆ. ಅನಿರೀಕ್ಷಿತ ಪ್ರವಾಸ ಕೈಗೊಳ್ಳುವ ಸಂಭವ ಇದೆ. ವಿವಾಹ ಕಾರ್ಯಕ್ಕೆ ನೆರವಾಗುವುದರಿಂದ ಸಂತಸ ಪ್ರಾಪ್ತಿ. ಆಳುಕಾಳುಗಳು ಕೈಕೊಡಬಹುದು. ಕೌಟುಂಬಿಕ ಸುವಾರ್ತೆ.

**ಶುಭದಿನ: 16.** ಲಕ್ಷ್ಮೀ ನಾರಾಯಣ ಹೃದಯ ಪಠಿಸಿರಿ.




ಎಲ್ಲ ಮೂಲಗಳಿಂದ ಧನಲಾಭ. ಜೀವನದ ಮಹತ್ವಾಕಾಂಕ್ಷೆ ಪೂರ್ಣಗೊಳ್ಳುವ ಸಮಯ. ಹಳೆಯ ಮಿತ್ರರ ಭೇಟಿ. ಸಂತಸ ಸಮಾರಂಭಕ್ಕಾಗಿ ಖರ್ಚು. ನವ ವಿವಾಹಿತರಿಗೆ ಸಂತಾನ ಪ್ರಾಪ್ತಿ. ಶುಭ ಕಾರ್ಯ ಯೋಜನೆ.

**ಶುಭದಿನ: 16.** ಸುಬ್ರಹ್ಮಣ್ಯ ಸ್ವಾಮಿಗೆ ಕ್ಷೀರಾಭಿಷೇಕ ಮಾಡಿರಿ.




ಹಲವು ದಿನಗಳಿಂದ ಬಯಸಿದ ಅಧಿಕಾರ ಪ್ರಾಪ್ತಿಯಿಂದ ಸಂತಸ. ವಿಶೇಷ ವಸ್ತ್ರ ಖರೀದಿ ಸಾಧ್ಯತೆ. ಕ್ರೀಡಾಪಟುಗಳಿಗೆ ಉತ್ತಮ ಅವಕಾಶ. ಕೌಟುಂಬಿಕ ಖರ್ಚು ಹಿಡಿತಕ್ಕೆ ಬರುವುದು. ಹಳೆಯ ವ್ಯಾಜ್ಯಗಳು ಇತ್ಯರ್ಥವಾಗಬಹುದು.

**ಶುಭದಿನ: 17.** ಶನಿಸ್ತೋತ್ರ ಪಠಿಸಿರಿ.




ಬಂಧುಗಳ ಸಹಕಾರದಿಂದ ಸಂಕಟ ಮುಕ್ತವಾಗಿ ನಿರಾಳವಾಗುವಿರಿ. ಪತ್ನಿಯ ಮನೋಕಾಮನೆ ಪೂರ್ಣವಾಗುವುದು. ದೂರಪ್ರವಾಸಕ್ಕೆ ಸಿದ್ಧತೆ. ನಾಗರಿಕರಿಂದ ಪ್ರಶಂಸೆ ನುಡಿ. ವ್ಯಾಪಾರದಲ್ಲಿ ಲಾಭ.

**ಶುಭದಿನ: 18.** ಕಾಲಭೈರವನ ಸೇವೆ ಮಾಡಿರಿ.




ತಾಪತ್ರಯಗಳ ನಡುವೆಯೂ ಕಾರ್ಯ ಯಶಸ್ಸು. ವಿರೋಧಿಗಳ ಮನದಲ್ಲೂ ಕೂಡಾ ಸಂತಸ ಸಂಭ್ರಮವನ್ನುಂಟು ಮಾಡುವಿರಿ. ಕೆಲ ಸ್ಥಳಗಳಲ್ಲಿ ವಿಶೇಷ ಜನಪ್ರಿಯತೆಯನ್ನು ಗಳಿಸುವಿರಿ. ಹಾಗಾಗಿ ಬರಬೇಕಾಗಿದ್ದ ಹಣವು ಶೀಘ್ರದಲ್ಲಿ ದೊರೆಯುವುದು.

**ಶುಭದಿನ: 17.** ಆಂಜನೇಯ ಸ್ತೋತ್ರವನ್ನು ತಪ್ಪದೆ ಪಠಿಸಿ.




ನೀವು ಸಾಕಷ್ಟು ಆಸಕ್ತಿದಾಯಕ ಆಮಂತ್ರಣಗಳನ್ನು ಪಡೆಯುತ್ತೀರಿ ಮತ್ತು ಒಂದು ಅಚ್ಚರಿಯ ಕೊಡುಗೆಯೂ ನಿಮಗೆ ಸಿಗಬಹುದು. ಪತ್ನಿ ಯೋಜನೆಯನ್ನು ಹಾಳುಮಾಡಬಹುದು; ತಾಳ್ಮೆ ಕಳೆದುಕೊಳ್ಳಬೇಡಿ.

**ಶುಭದಿನ: 15.** ಹನುಮಾನ್ ಚಾಲೀಸ್ ಓದಿರಿ.




ವೃತ್ತಿ ಜೀವನದ ಬಗ್ಗೆ ಗಂಭೀರ ಕೆಲಸ ಮಾಡುವಿರಿ. ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆ. ಖರ್ಚುಗಳು ಜಾಸ್ತಿಯಾಗುವ ಸಾಧ್ಯತೆಯಿರುತ್ತದೆ. ಸ್ನೇಹಿತರು ನಿಜವಾಗಿಯೂ ಈ ಸಂದರ್ಭದಲ್ಲಿ ಸಹಾಯ ಮಾಡುವರು. ಪ್ರತಿಷ್ಠೆ ಹೆಚ್ಚುವುದು.

**ಶುಭದಿನ: 14.** ರಾಘವೇಂದ್ರ ಸ್ವಾಮಿಗಳ ಆರಾಧನೆ ಮಾಡಿರಿ.


DHEEPAM
LAMP OIL
BLEND OF 5 OILS
ದೀಪದ ಬೆಳಕಲ್ಲಿ
ಒಂದು ದೈವೀಕ
ಅನುಭವ
ಸುಗಂಧ ಸುವಾಸನೆ
ಹರಡುವ ಪಂಚ ದೀಪ ಎಣ್ಣೆ
